# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ)ರವರ ಕಛೇರಿ, ಅನೆಕ್ಸ್ ಕಟ್ಟಡ-2, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-02.

ಸಂಖ್ಯೆ : ಮು.ಆ(ಸಾ.ಆ)/ಪಿಆರ್/ /2020-21 ದಿನಾಂಕ : 07.07.2020

## ಪತ್ರಿಕಾ ಟಿಪ್ಪಣಿ

**ವಿಷಯ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಬರುವ ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ ರೆಫರಲ್ ಆಸ್ಪತ್ರೆಗಳಲ್ಲಿ ಜ್ವರ ಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಸೂಚನೆಯಂತೆ.

- ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್-19ನ್ನು ಸರ್ವವ್ಯಾಪಿ ಸಾಂಕ್ರಾಮಿಕ ರೋಗವೆಂದು ಘೋಷಣೆ ಮಾಡಿದ್ದು, ಈ ರೋಗದ ಪ್ರಸರಣವನ್ನು ತಡೆಗಟ್ಟುವ ನಿಟ್ಟಿನಲ್ಲಿ ಭಾರತ ಗಣರಾಜ್ಯವು 1.0 ರಿಂದ 4.0 ಹಂತಗಳಲ್ಲಿ ಲಾಕ್‌ಡೌನ್ ಕ್ರಮಗಳು ಸೇರಿದಂತೆ ಹಲವು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿದೆ. ಮುಂದುವರೆದು ಈ ರೋಗ ನಿಯಂತ್ರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಮರೋಪಾದಿಯಲ್ಲಿ ಕಾರ್ಯನಿರತವಾಗಿದೆ.
- ಲಾಕ್ ಡೌನ್ ಪ್ರಕ್ರಿಯೆಯನ್ನು ಹಂತಹಂತವಾಗಿ ಹಿಂತೆಗೆಯುತ್ತಾ ಬಂದಿದ್ದು, ವಿವಿಧ ಮಾದರಿಯ ಸಾರಿಗೆ ವ್ಯವಸ್ಥೆಯನ್ನು ಅಂತರ ಜಿಲ್ಲಾ, ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ವ್ಯಾಪ್ತಿಯಲ್ಲಿ ಮುಕ್ತಗೊಳಿಸಿದೆ. ಈ ಹಿನ್ನೆಲೆಯಲ್ಲಿ ಪರಿಣಾಮಕಾರಿ ಆರೋಗ್ಯ ತಪಾಸಣೆ ಮತ್ತು ಕ್ವಾರಂಟೈನ್ ವ್ಯವಸ್ಥೆಯನ್ನು ವಿಕೇಂದ್ರಿಕೃತ ಸ್ವರೂಪದಲ್ಲಿ ಇನ್ನಿತರ ಸಿಬ್ಬಂದಿಗಳ ಪಾಲ್ಗೊಳ್ಳುವಿಕೆ ಮತ್ತು ಆಡಳಿತ್ಮಾತಕ ಕ್ರಮಗಳೊಂದಿಗೆ ಕೋವಿಡ್-19 ರ ನಿಯಂತ್ರಣವನ್ನು ಖಾತ್ರಿಪಡಿಸಬೇಕಾಗಿದೆ.
- ಕೋವಿಡ್-19 ರ ಪ್ರಸರಣ ಮತ್ತು ನಿಯಂತ್ರಣದ ಭಾಗವಾಗಿ ಕರ್ನಾಟಕ ರಾಜ್ಯವು ದೇಶದಲ್ಲಿ ಜ್ವರ/ಫ್ಲೂ ಚಿಕಿತ್ಸಾಲಯಗಳ ಸ್ಥಾಪನೆಯಂತಹ ವಿನೂತನ ಕ್ರಮವನ್ನು ಅನುಸರಿಸಿತು. ಈ ಕೇಂದ್ರಗಳು ಕೋವಿಡ್ ಆರೋಗ್ಯ ವಿಕೋಪ ಸ್ಥಿತಿಯಲ್ಲಿ ಸಮಾಲೋಚನೆ ಮತ್ತು ಹೊರ ರೋಗಿಗಳ ಆರೈಕೆಯಂತಹ ಕ್ರಮಗಳನ್ನು ಸುಗಮಗೊಳಿಸಿವೆ, ಕೋವಿಡ್ -19 ರೋಗಲಕ್ಷಣಗಳಾದ ಜ್ವರ, ಕೆಮ್ಮು, ಶೀತ, ಗಂಟಲು ಕೆರೆತ, ಉಸಿರಾಟದ ತೊಂದರೆಯಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಮೊದಲ ಸಂಪರ್ಕ ಕೇಂದ್ರಗಳಾಗಿ ಸೂಕ್ತ ಆರೈಕೆಗೆ ಮಾರ್ಗದರ್ಶನ ನೀಡುತ್ತಿವೆ. ಪ್ರಸ್ತುತ ಕಾಲಘಟ್ಟದಲ್ಲಿ ಶೀತ ಸಂಬಂಧಿ ಖಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳ ತಪಾಸಣೆಯು ಕೋವಿಡ್-19 ರ ಪ್ರಕರಣಗಳನ್ನು ಗುರುತಿಸಲು, ಪ್ರತ್ಯೇಕಗೊಳಿಸಲು ಮತ್ತು ಆರೈಕೆ ಮಾಡಲು ಪೂರಕ ಸ್ವರೂಪವಾಗಿದೆ. ಬೆಂಗಳೂರಿನಲ್ಲಿ ದಿನೇ ದಿನೇ ತಪಾಸಣಾ ಸಾಮರ್ಥ್ಯವು ವೃದ್ಧಿಯಾಗಿದ್ದು, ಸ್ಥಾಪನೆಯಾದ ಸಂಧರ್ಭದಲ್ಲಿ ಪ್ರತಿ ದಿನ ಈ ಕೇಂದ್ರಗಳಲ್ಲಿ ತಪಾಸಣಾ

ಸಾಮರ್ಥ್ಯ ನೂರರ ಗಡಿಯಲ್ಲಿತ್ತು ದಿನೇ ದಿನೇ ವೃದ್ದಿಯಾಗಿದ್ದು, ಸಾವಿರಾರು ಸಂಖ್ಯೆಯಲ್ಲಿ ಈ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದು, ಏಪ್ರಿಲ್ ನಿಂದ ಇಲ್ಲಿಯ ತನಕ 20,000(ಇಪ್ಪತ್ತು ಸಾವಿರ)ಕ್ಕಿಂತ ಹೆಚ್ಚು ವ್ಯಕ್ತಿಗಳು ಈ ಕೇಂದ್ರಗಳಲ್ಲಿ ಆರೈಕೆಯನ್ನು ಪಡೆದಿರುತ್ತಾರೆ.

- ಈ ನಿಟ್ಟಿನಲ್ಲಿ ಶೀತ ಸಂಬಂಧಿ ಖಾಯಿಲೆಗಳು ಮತ್ತು ತೀವ್ರತೆರನಾದ ಉಸಿರಾಟದ ಸೋಂಕಿನಿಂದ ಬಳಲುತ್ತಿರುವ ಪ್ರಕರಣಗಳ ತಪಾಸಣೆ, ಗಂಟಲು ದ್ರವದ ಮಾದರಿಯ ಸಂಗ್ರಹಣೆ ಮತ್ತು ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡಲು ಜ್ವರ ಚಿಕಿತ್ಸಾಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ.
- ಬೆಂಗಳೂರು ಮಹಾನಗರದಲ್ಲಿ 133 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 06 ರೆಫರಲ್ ಆಸ್ಪತ್ರೆಗಳನ್ನು ಜ್ವರ ಚಿಕಿತ್ಸಾಲಯಗಳಾಗಿ ಪರಿವರ್ತಿಸಲಾಗಿದ್ದು, ಈ ಚಿಕಿತ್ಸಾಲಯಗಳಲ್ಲಿ ಸಂಶಯಾಸ್ಪದ ಪ್ರಕರಣಗಳಿಗೆ ಗಂಟಲು ದ್ರವಧ ಮಾದರಿಯನ್ನು ಸಂಗ್ರಹಣೆ ಮಾಡಲಾಗುತ್ತಿದೆ.
- ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಗಂಟಲು ದ್ರವದ ಮಾದರಿಯನ್ನು ನಿಗದಿಪಡಿಸಿದ ಕೋವಿಡ್–19 ಪ್ರಯೋಗಾಲಯಕ್ಕೆ ಒಯ್ಯಲು ಸಾಗಾಣಿಕೆ ವ್ಯವಸ್ಥೆಯನ್ನು ಬಿಬಿಎಂಪಿಯು ಮಾಡಲಾಗಿದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 133 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 06 ರೆಫರಲ್ ಆಸ್ಪತ್ರೆಗಳನ್ನು ಜ್ವರ ಚಿಕಿತ್ಸಾಲಯಗಳಲ್ಲಿ ಸಂಗ್ರಹಿಸಿದ ಗಂಟಲು ಮಾದರಿ ದ್ರವದ ಪರೀಕ್ಷಾ ವೆಚ್ಚವು ಸಂಪೂರ್ಣವಾಗಿ ಉಚಿತವಾಗಿದ್ದು, ಬಿಬಿಎಂಪಿಯು ವೆಚ್ಚವನ್ನು ಭರಿಸಲಿದೆ.
- ಎಲ್ಲಾ ಜ್ವರ ಚಿಕಿತ್ಸಾಲಯಗಳು ಪ್ರತಿ ದಿನ ಬೆಳಗ್ಗೆ 9.00 ರಿಂದ ಸಂಜೆ 4.00 ಗಂಟಯವರೆಗೂ ಕಾರ್ಯನಿರ್ವಹಿಸಲಿದ್ದು ಹಾಗೂ ಪ್ರತಿ ದಿನ ಗಂಟಲು ಮಾದರಿ ದ್ರವದ ಪರೀಕ್ಷೆಯನ್ನು ಟೋಕನ್ ವಿತರಿಸಿ ಅದರಂತೆ ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೂ ಮಾಡಲಾಗುವುದು.

(133 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 06 ರೆಫರಲ್ ಆಸ್ಪತ್ರೆಗಳ ಜ್ವರ ಚಿಕಿತ್ಸಾಲಯಗಳ ಪಟ್ಟಿಯನ್ನು ಅಡಕವಿರಿಸಲಾಗಿದೆ).

ಸಹಿ/–
ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ